## ನಿಮ್ಮೊಡನೆ

# ಅಪೌಷ್ಟಿಕತೆ ಮತ್ತು ಭಾಗ್ಯ ವಿಧಾತರು

ಪ್ರಾದೇಶಿಕ, ಆರ್ಥಿಕ ಅಸಮಾನತೆ ಮಕ್ಕಳ ಪೌಷ್ಟಿಕತೆಯಲ್ಲೂ ಇರುವಂತಿದೆ. ರಾಯಚೂರು ಜಿಲ್ಲೆಯೊಂದರಲ್ಲೇ ಎಂಟು ಸಾವಿರಕ್ಕೂ ಹೆಚ್ಚು ಮಕ್ಕಳು ಪೋಷಕಾಂಶಗಳ ಕೊರತೆ ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳು, ಬಡವರು, ಹಿಂದುಳಿದವರು ವಾಸಿಸುತ್ತಿರುವ ಊರುಕೇರಿಗಳಲ್ಲಿ ಮಕ್ಕಳು ಹೆಚ್ಚಾಗಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

‘ಬನ್ನಿ, ಅಪೌಷ್ಟಿಕತೆಯನ್ನು ದೇಶದಿಂದ ಹೊಡೆದೋಡಿಸೋಣ’ ಎಂದು ಬಾಲಿವುಡ್ ತಾರೆ ಅಮೀರ್ ಖಾನ್ ಕರೆ ನೀಡುವ ಜಾಹೀರಾತುಗಳು ಕಿರುತೆರೆಯ ವಾಹಿನಿಗಳಲ್ಲಿ ನಿರಂತರವಾಗಿ ಪ್ರಸಾರಗೊಳ್ಳುತ್ತಿವೆ. ಸ್ಥಳೀಯ ಸಿನಿಮಾ ತಾರೆಗಳು ಕೂಡ ಅಪೌಷ್ಟಿಕತೆ ವಿರೋಧಿ ಆಂದೋಲನದಲ್ಲಿ ಘೋಷಣೆಗಳನ್ನು ಮೊಳಗಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ‘ಆಹಾರ ಭದ್ರತಾ ಕಾಯ್ದೆ’, ರಾಜ್ಯ ಸರ್ಕಾರದ ‘ಅನ್ನಭಾಗ್ಯ’, ‘ಕ್ಷೀರಭಾಗ್ಯ’ ಯೋಜನೆಗಳ ಉದ್ದೇಶ ಹಸಿದ ಹೊಟ್ಟೆಗಳನ್ನು ತುಂಬಿಸುವುದಾಗಿದೆ. ಇಷ್ಟೆಲ್ಲ ಕರೆ, ಯೋಜನೆಗಳ ಪರಿಣಾಮ ಏನು? ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದಿರುವ ಸಮೀಕ್ಷೆಯೊಂದರ ಪ್ರಕಾರ– ‘ಅಪೌಷ್ಟಿಕತೆಯ ಕಾರಣದಿಂದಾಗಿ ಒಂದು ತಿಂಗಳ ಅವಧಿಯಲ್ಲಿ ಐದು ಶಿಶುಗಳು ಮೃತಪಟ್ಟಿವೆ’.

ಇದು ದುಗ್ಗಾವತಿ ಗ್ರಾಮ ಪಂಚಾಯಿತಿಯೊಂದರ ಕಥೆಯಲ್ಲ. ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಿ ಗುರ್ತಿಸಿಕೊಂಡಿರುವ ನರೇಂದ್ರ ಮೋದಿ ಅವರು ಜಾದೂ ಮಾಡಿದ್ದಾರೆ ಎನ್ನಲಾದ ಗುಜರಾತ್‌ನ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ‘ಗುಜರಾತ್‌ನ ಹತ್ತು ಜಿಲ್ಲೆಗಳಲ್ಲಿ 3.3 ಲಕ್ಷಕ್ಕೂ ಹೆಚ್ಚು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇವರಲ್ಲಿ 26,871 ಮಕ್ಕಳು ತೀವ್ರ ಅಪೌಷ್ಟಿಕತೆಗೆ ತುತ್ತಾಗಿದ್ದಾರೆ’– ಇದು ಗುಜರಾತ್‌ನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಕಳೆದ ಮಾರ್ಚ್ ತಿಂಗಳಲ್ಲಿ ವಿಧಾನ ಸಭೆಯಲ್ಲಿ ನೀಡಿರುವ ಅಂಕಿಅಂಶ. ಮತ್ತೊಂದು ಅಂಕಿಅಂಶದ ಪ್ರಕಾರ, ಗುಜರಾತ್‌ನಲ್ಲಿ ನೂರಕ್ಕೆ ನಲವತ್ತೈದು ಮಕ್ಕಳು ಅಪೌಷ್ಟಿಕತೆಗೆ ಒಳಗಾಗಿದ್ದಾರೆ. ಅಭಿವೃದ್ಧಿಯ ಪ್ರಭಾವಳಿಯಲ್ಲಿ ಮಿನುಗುತ್ತಿರುವ ಗುಜರಾತಿನದೇ ಈ ಪಾಡಾದರೆ ಉಳಿದ ರಾಜ್ಯಗಳ ಗತಿಯೇನು?

ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳ ಕರ್ನಾಟಕದ ಪರಿಸ್ಥಿತಿ ಸಮಾಧಾನಕರವಾಗಿಯೇನೂ ಇಲ್ಲ. ಪ್ರಾದೇಶಿಕ ಅಸಮಾನತೆ ಮಕ್ಕಳ ಪೌಷ್ಟಿಕತೆಯಲ್ಲೂ ಇರುವಂತಿದೆ. ರಾಯಚೂರು ಜಿಲ್ಲೆಯೊಂದರಲ್ಲೇ ಎಂಟು ಸಾವಿರಕ್ಕೂ ಹೆಚ್ಚು ಮಕ್ಕಳು ಪೋಷಕಾಂಶಗಳ ಕೊರತೆ ಎದುರಿಸುತ್ತಿದ್ದಾರೆ. ಅಪೌಷ್ಟಿಕತೆಗೆ ಒಳಗಾದ 70 ಸಾವಿರಕ್ಕೂ ಹೆಚ್ಚು ಮಕ್ಕಳು ರಾಜ್ಯದಲ್ಲಿದ್ದಾರೆ ಎನ್ನುವ ಅಂದಾಜಿದೆ. ಗ್ರಾಮೀಣ ಪ್ರದೇಶಗಳು, ಬಿಪಿಎಲ್ ಕಾರ್ಡ್‌ದಾರರು ಹೆಚ್ಚಾಗಿರುವ ಪ್ರದೇಶಗಳು, ಹಿಂದುಳಿದ ಸಮುದಾಯಗಳು ವಾಸಿಸುತ್ತಿರುವ ಊರುಕೇರಿಗಳಲ್ಲಿ ಮತ್ತು ಕಾಡಿನಂಚಿನ ವಸತಿ ಪ್ರದೇಶಗಳಲ್ಲಿನ ಮಕ್ಕಳು ಹೆಚ್ಚಾಗಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

ಮಕ್ಕಳಲ್ಲಿನ ಪೋಷಕಾಂಶಗಳ ಕೊರತೆ ದೇಶದ ಎಲ್ಲ ರಾಜ್ಯಗಳನ್ನೂ ಕಾಡುತ್ತಿರುವ ಸಮಸ್ಯೆ. ‘ವಿಶ್ವ ಆಹಾರ ಯೋಜನಾ ಮಂಡಳಿ’ ಅಂದಾಜು ಮಾಡಿರುವಂತೆ ಪೋಷಕಾಂಶಗಳ ಕೊರತೆ ಎದುರಿಸುತ್ತಿರುವ ವಿಶ್ವದ 86.8 ಕೋಟಿ ಜನರಲ್ಲಿ ಸುಮಾರು 27 ಕೋಟಿ ಮಂದಿ ಭಾರತದಲ್ಲೇ ಇದ್ದಾರೆ. ಹಸಿವು ಮತ್ತು ಅಪೌಷ್ಟಿಕತೆಯಿಂದಾಗಿ ಭಾರತದ ಅಭಿವೃದ್ಧಿಯ ಓಟ ಶೇ 3ರಷ್ಟು ಕುಂಠಿತಗೊಂಡಿದೆ ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ.

ಕನಿಷ್ಠ ಆರು ತಿಂಗಳಾಗುವವರೆಗೂ ಮಕ್ಕಳಿಗೆ ಎದೆಹಾಲು ಊಡಿಸುವುದು ಅತ್ಯಗತ್ಯ. ಆದರೆ, ಹರಯದ ಅನೇಕ ಅಮ್ಮಂದಿರಿಗೆ ಎದೆಹಾಲಿನ ಮಹತ್ವದ ತಿಳಿವಳಿಕೆಯ ಕೊರತೆಯಿದೆ. ಅವರು ಎದುರಿಸುವ ಕೌಟುಂಬಿಕ ಹಾಗೂ ವೃತ್ತಿಯ ಒತ್ತಡಗಳು ಕೂಡ ಮಕ್ಕಳಿಗೆ ಎದೆಹಾಲನ್ನು ತಪ್ಪಿಸುತ್ತಿವೆ. ವಲಸೆ ಬರುವ ಕೂಲಿ ಕಾರ್ಮಿಕ ತಾಯಂದಿರು ದುಡಿಮೆಯ ಕಾರಣದಿಂದಾಗಿ ಹಸುಗೂಸುಗಳಿಗೆ ಎದೆಹಾಲು ನೀಡುವುದನ್ನು ತಪ್ಪಿಸುವುದಿದೆ. ಈ ಎಲ್ಲ ಸಂದರ್ಭಗಳಲ್ಲಿ ಎಳೆಯ ಕಂದಮ್ಮಗಳು ಮಕ್ಕಳು ಸಹಜವಾಗಿಯೇ ದುರ್ಬಲರಾಗುತ್ತಾರೆ. ತಾಯಂದಿರ ಅಪೌಷ್ಟಿಕತೆ ಎದೆಹಾಲಿಗೆ ಕೊರತೆಯಾಗುವುದೂ ಇದೆ. ಎದೆಹಾಲಿನ ಕೊರತೆಯಿಂದಾಗಿ ಪ್ರತಿವರ್ಷ ವಿಶ್ವದಲ್ಲಿ 14 ಲಕ್ಷ ಮಕ್ಕಳು ಸಾವಿಗೀಡಾಗುತ್ತಿದ್ದಾರೆ ಎನ್ನಲಾಗಿದೆ.

ಜೀವಸತ್ವಗಳ ಕೊರತೆಯಿಂದ ಮಕ್ಕಳು ನರಳುವುದು ಅಥವಾ ಸಾವಿಗೀಡಾಗುವುದು ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ಸಂಗತಿ. ದುರದೃಷ್ಟವೆಂದರೆ, ಜನ ಪ್ರತಿನಿಧಿಗಳ ಪಾಲಿಗೆ ಸಮಾಜದ ಹಸಿವು ಕೂಡ ತಮ್ಮ ರಾಜಕಾರಣದ ಬಂಡವಾಳವಾಗಿದೆ. ಸಮಾಜದಲ್ಲಿನ ಹಸಿವು ನಾಚಿಕೆ ಹುಟ್ಟಿಸುವ ಬದಲು, ವಿವಿಧ ಯೋಜನೆಗಳ ‘ಭಾಗ್ಯ’ವಿಧಾತರು ತಾವೆಂದು ಹೇಳಿಕೊಳ್ಳುವುದಕ್ಕೆ ಕಾರಣವಾಗಿದೆ. ಆಹಾರ ಪೂರೈಕೆ – ಅಪೌಷ್ಟಿಕತೆ ನಿರ್ಮೂಲನೆ ಕ್ರಮಗಳು ಆಡಳಿತ ಯಂತ್ರದ ಪಾಲಿಗೆ ಸಾಧನೆಗಳ ತುರಾಯಿಗಳಂತೆ ಕಾಣಿಸುತ್ತಿವೆ. ಅಪೌಷ್ಟಿಕತೆ ನಿರ್ಮೂಲನೆಗೆಂದು ಚಾಲ್ತಿಯಲ್ಲಿರುವ ಯೋಜನೆಗಳು ಬಹುತೇಕ ಸಂದರ್ಭಗಳಲ್ಲಿ ಮಧ್ಯವರ್ತಿಗಳ ಪೌಷ್ಟಿಕತೆ ವೃದ್ಧಿಗೆ ಕಾರಣವಾಗಿವೆ. ಅಂಗನವಾಡಿಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಎಷ್ಟರ ಮಟ್ಟಿಗೆ ಪೌಷ್ಟಿಕವಾಗಿದೆ ಎನ್ನುವುದನ್ನು ಫಲಾನುಭವಿಗಳು ಬಲ್ಲರು. ಜನಪರ ಚಿಂತನೆಯ ನಿಟ್ಟಿನಲ್ಲಿ ಸರ್ಕಾರ ಕೂಡ ಅಪೌಷ್ಟಿಕತೆಯಿಂದ ನರಳುತ್ತಿರುವಂತಿದೆ. ಈ ಸಿಕ್ಕಿನಿಂದ ಹೊರಬಂದಲ್ಲಿ, ಪೌಷ್ಟಿಕಾಂಶಗಳ ಕೊರತೆಯಿಂದ ಮಕ್ಕಳು ಸಾವಿಗೀಡಾಗುತ್ತಿರುವುದನ್ನು ತಡೆಯುವಲ್ಲಿ ಗಂಭೀರವಾಗಿ ಕ್ರಿಯಾಶೀಲವಾಗುವುದು ಸರ್ಕಾರಕ್ಕೆ ಸಾಧ್ಯವಾದೀತು.

■ ರಘುನಾಥ ಚ.ಹ.



ಈಶ್ವರ